REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2021-2023
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ
# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ


ಸಂಪುಟ : 29 । ಸಂಚಿಕೆ : 24 । ಸೆಪ್ಟೆಂಬರ್ 21, 2022 । ಬುಧವಾರ । ಪುಟಗಳು : 8 । ಬೆಲೆ : 2/-

## ಎನ್‌ಡಿಎಸ್ (Negotiated Dealing System) ಕಾಲ್ ಪ್ಲಾಟಫಾರ್ಮ್ ಸದಸ್ಯತ್ವ ಪಡೆದುಕೊಳ್ಳುವ ಕುರಿತು ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು, ವೃತ್ತಿಪರ ನಿರ್ದೇಶಕರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಜೊತೆಗೆ ವಿಡಿಯೋ ಕಾನ್ವರೆನ್ಸ್

**ಬೆಂಗಳೂರು :** ಮಹಾಮಂಡಳವು ದಿನಾಂಕ : 16.09.2022 ರಂದು ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಭಾರತೀಯ ರಿಜರ್ವ್ ಬ್ಯಾಂಕಿನ (Negotiated Dealing System) NDS ಕಾಲ್ ಪ್ಲಾಟಫಾರ್ಮ್ ಸದಸ್ಯತ್ವ ಪಡೆದುಕೊಳ್ಳುವ ಕುರಿತು ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರು ವಿಡಿಯೋ ಕಾನ್ವರೆನ್ಸ್‌ನಲ್ಲಿ ಭಾಗವಹಿಸಿದ ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳಿಗೆ ಸ್ವಾಗತವನ್ನು ಕೋರಿದರು.

ಈ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಮಹಾಮಂಡಳದ ನಿರ್ದೇಶಕರಾದ ಶ್ರೀ ಹೆಚ್.ಸಿ. ಕೃಷ್ಣರವರು ಮಾತನಾಡಿ ಈ ದಿನ ಏರ್ಪಡಿಸಿರುವ ವಿಡಿಯೋ ಕಾನ್ವರೆನ್ಸ್‌ನಲ್ಲಿ ತಾವೆಲ್ಲ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಇದರ ಸದುಪಯೋಗಪಡೆದುಕೊಳ್ಳಬೇಕೆಂದರು.

ಪಟ್ಟಣ ಸಹಕಾರ ಬ್ಯಾಂಕುಗಳು NDS ಕಾಲ್ ಪ್ಲಾಟಫಾರ್ಮ್ ಸದಸ್ಯತ್ವವನ್ನು ಪಡೆದುಕೊಳ್ಳುವುದರ ಅನುಕೂಲದ ಬಗ್ಗೆ Clearing Corporation of India Ltd., (CCIL) ಅಧಿಕಾರಿಗಳಾದ ಶ್ರೀ ಲೋಕೇನಾಥ ರುದ್ರಾ, ಶ್ರೀ ಮನೋಜ ಪಾಂಡೆ ಶ್ರೀ ಲಲಿತ್ ಭಾಗರಾವ್‌ರವರುಗಳು ವಿವರವಾಗಿ ಉಪನ್ಯಾಸ ನೀಡಿದರು. ಮಹಾಮಂಡಳದ ಸಲಹೆಗಾರರಾದ ಶ್ರೀ ಸುಧಾಕರ ಭಟ್‌ರವರು ಭಾಗವಹಿಸಿದ್ದರು.



ಕೊನೆಯಲ್ಲಿ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ವಂದನಾರ್ಪಣೆ ಸಲ್ಲಿಸಿದರು. ಈ ವಿಡಿಯೋ ಕಾನ್ವರೆನ್ಸ್ ಕಾರ್ಯಾಗಾರದಲ್ಲಿ 200ಕ್ಕೂ ಹೆಚ್ಚು ಪಟ್ಟಣ ಸಹಕಾರ ಬ್ಯಾಂಕುಗಳ ವೃತ್ತಿಪರ ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಭಾಗವಹಿಸಿ (Negotiated Dealing System) NDS ಕಾಲ್ ಪ್ಲಾಟಫಾರ್ಮ್ ಸದಸ್ಯತ್ವದ ಉಪಯೋಗದ ಬಗ್ಗೆ ವಿವರವಾಗಿ ತಿಳಿದುಕೊಂಡರು.

## ಬ್ಯಾಂಕುಗಳಲ್ಲಿ ಸ್ಥಳೀಯ ಭಾಷೆ ಮಾತನಾಡುವ ಸಿಬ್ಬಂದಿ ನೇಮಕ ಮಾಡಿ: ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್



**ನವದೆಹಲಿ :** ಬ್ಯಾಂಕ್‌ಗಳಲ್ಲಿ ಸ್ಥಳೀಯ ಭಾಷೆ ಮಾತನಾಡುವ ಸಿಬ್ಬಂದಿಯನ್ನು ನೇಮಕ ಮಾಡಬೇಕು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸಲಹೆ ನೀಡಿದ್ದಾರೆ.

ಮುಂಬೈನಲ್ಲಿ ನಡೆದ ಭಾರತೀಯ ಬ್ಯಾಂಕ್ ಒಕ್ಕೂಟದ 75ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ನಿರ್ಮಲಾ ಸೀತಾರಾಮನ್ ಮಾತನಾಡಿದರು. ನೇಮಕಾತಿ ಪ್ರಕ್ರಿಯೆಯಲ್ಲಿ ಸ್ಥಳೀಯ ಭಾಷೆ ಗೊತ್ತಿರಬೇಕು ಎಂಬುದನ್ನು ಉಲ್ಲೇಖಿಸಬೇಕು ಎಂದು ಒತ್ತಾಯಿಸಿದ್ದಾರೆ. ಭಾರತ ವೈವಿಧ್ಯಗಳನ್ನು ಹೊಂದಿರುವ ರಾಷ್ಟ್ರವಾಗಿರುವುದರಿಂದ ಬ್ಯಾಂಕ್ ಸಿಬ್ಬಂದಿಗಳಿಗೆ ಸ್ಥಳೀಯ ಭಾಷೆ ಗೊತ್ತಿರಬೇಕಾದದ್ದು ಅಗತ್ಯ ಎಂದು ಸೀತಾರಾಮನ್ ಪ್ರತಿಪಾದಿಸಿರುವುದಾಗಿ 'ಹಿಂದೂ ಬ್ಯುಸಿನೆಸ್‌ಲೈನ್' ವರದಿ ಮಾಡಿದೆ.

ಸ್ಥಳೀಯ ಬ್ರಾಂಚ್‌ಗಳ ಸಿಬ್ಬಂದಿ ಸ್ಥಳೀಯ ಭಾಷೆಯನ್ನು ಮಾತನಾಡುವುದಿಲ್ಲ. ಬದಲಾಗಿ ದೇಶಭಕ್ತಿಯ ಪಾಠ ಹೇಳುತ್ತಾರೆ. 'ನಿಮಗೆ ಹಿಂದಿ ಗೊತ್ತಿಲ್ಲವೇ? ನೀವು ಭಾರತೀಯನಲ್ಲದಿರಬಹುದು' ಎಂದು ಹೇಳುವುದರಿಂದ ಯಾವುದೇ ಉತ್ತಮ ವ್ಯವಹಾರ ನಡೆಸಲು ಸಾಧ್ಯವಿಲ್ಲ ಎಂದು ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಬ್ಯಾಂಕ್‌ಗಳಲ್ಲಿ ಸಿಬ್ಬಂದಿ ನಡುವೆ ಗೋಡೆಗಳು ನಿರ್ಮಾಣಗೊಂಡಿವೆ. ಎಲ್ಲ ಕೆಲಸವೂ ಆನ್‌ಲೈನ್‌ನಲ್ಲೇ ನಡೆಯುತ್ತದೆ ಎಂದು ಪರಸ್ಪರ ಮಾತನಾಡುವುದು ಕಡಿಮೆಯಾಗುತ್ತಿದೆ. ಸಿಬ್ಬಂದಿಗಳು ಗ್ರಾಹಕರ ಹಿತದೃಷ್ಟಿಯಿಂದ ಮಾತನಾಡಬೇಕು ಎಂದು ಸೀತಾರಾಮನ್ ಇದೇ ವೇಳೆ ತಿಳಿಸಿದ್ದಾರೆ.

2 2023ಕ್ಕೆ ಆರ್ಥಿಕ ಹಿಂಜರಿತ : ವಿಶ್ವಬ್ಯಾಂಕ್ ಎಚ್ಚರಿಕೆ
4 ನಾರಾಯಣಗುರು ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ. ಉಡುಪಿ : ವಾರ್ಷಿಕ ಮಹಾಸಭೆ
7 ನಿಮ್ಮ ಪ್ರಶ್ನೆ – ನಮ್ಮ ಉತ್ತರ



## ಅತ್ಮೀಯ ಸಹಕಾರಿಗಳೇ...

### ದೇಶದಲ್ಲಿನ ಭಾಷಾ ವೈವಿಧ್ಯತೆಯನ್ನು ಬ್ಯಾಂಕುಗಳು ಅರಿತುಕೊಳ್ಳಬೇಕು

ಇತ್ತೀಚಿನ ದಿನಗಳಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿನ ಸಿಬ್ಬಂದಿ ಗ್ರಾಹಕರು ಅವರೊಂದಿಗೆ ಕನ್ನಡದಲ್ಲಿ ಮಾತನಾಡಲು ಯತ್ನಿಸಿದರೆ ಅಥವ ಮಾಹಿತಿ ಪಡೆಯಬಯಸಿದರೆ, ಹಿಂದಿ/ಇಂಗ್ಲಿಷ್‌ನಲ್ಲಿ ಮಾತನಾಡುವಂತೆ ಒತ್ತಾಯಿಸುತ್ತಿದ್ದಾರೆ ಎನ್ನುವ ದೂರುಗಳು ಎಲ್ಲೆಡೆಯಿಂದ ಕೇಳಿ ಬರುತ್ತಿವೆ. ಇಷ್ಟು ವರ್ಷಗಳು ಇಲ್ಲದ ಸಮಸ್ಯೆ ಈಗ ಏಕಾಗುತ್ತಿದೆ. ಕಾರಣ ಸ್ಪಷ್ಟವಾಗಿದೆ; ಕೇಂದ್ರ ಸರ್ಕಾರಕ್ಕೆ ಇರುವ ಅತಿಯಾದ ಹಿಂದಿ ಭಾಷಾಭಿಮಾನ. ಅಲ್ಲದೆ, ಕೆಲ ವರ್ಷಗಳಿಂದ ಬ್ಯಾಂಕಿಂಗ್ ನೇಮಕಾತಿಯಲ್ಲಿ ಉತ್ತರ ಭಾರತೀಯರಿಗೆ ಹೆಚ್ಚಿನ ಆದ್ಯತೆ ದೊರಕುತ್ತಿರುವುದೇ ಆಗಿದೆ.

ಪ್ರಸ್ತುತ ಕೇಂದ್ರ ಸರ್ಕಾರ ಒಂದು ರಾಷ್ಟ್ರ ಒಂದು ಕಾನೂನು, ಒಂದು ಚುನಾವಣೆ, ಒಂದು ಶಾಸಕಾಂಗ ನೀತಿ, ಒಂದು ನೋಂದಣಿ, ಒಂದು ತೆರಿಗೆ, ಒಂದು ಭಾಷೆ ಹೀಗೆ ಪ್ರತಿಯೊಂದನ್ನು ಒಂದು ಎಂದು ಹೇಳುತ್ತಾ ಎಲ್ಲದರ ಮೇಲೆ ಏಕಸ್ವಾಮ್ಯ ಸಾಧಿಸಲು ಯತ್ನಿಸುತ್ತಾ, ರಾಜ್ಯಗಳ ಸಂವಿಧಾನ ಬದ್ಧ ಹಕ್ಕುಗಳನ್ನು ಧಮನಿಸುತ್ತಿರುವುದನ್ನು ಕಾಣುತ್ತಿದ್ದೇವೆ. ಜೊತೆಗೆ ದೇಶದ ಉಳಿದ ಎಲ್ಲಾ ಅಧಿಕೃತ ರಾಷ್ಟ್ರ ಭಾಷೆಗಳನ್ನು ಹೊಸಕಿ ಹಾಕಲು ಯತ್ನಿಸುತ್ತಿದೆ.

ಈ ರೀತಿಯಾಗಿ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಭಾಷಾ ವಿಚಾರವಾಗಿ ನಡೆಯುತ್ತಿರುವ ತಿಕ್ಕಾಟದ ಘಟನೆಗಳು ಹೆಚ್ಚುತ್ತಿರುವ ನಡುವೆ, ಬ್ಯಾಂಕುಗಳಿಗೆ ಆಯಾ ರಾಜ್ಯಗಳ ಭಾಷೆ ಬಲ್ಲವರನ್ನೇ ಉದ್ಯೋಗಕ್ಕೆ ನೇಮಿಸಿಕೊಳ್ಳುವಂತೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೂಚನೆ ನೀಡಿರುವುದು ಶ್ಲಾಘನೀಯ. ಬರಿಯ ಸೂಚನೆ ನೀಡಿದರಷ್ಟೇ ಸಾಲದು, ಈ ಕುರಿತಂತೆ ಆರ್.ಬಿ.ಐ. ಸೂಕ್ತ ಸುತ್ತೋಲೆ ಹೊರಡಿಸಬೇಕಿದೆ.

ಕೇಂದ್ರ ಸರ್ಕಾರ ಅರ್ಥ ಮಾಡಿಕೊಳ್ಳಬೇಕು; ನಮ್ಮ ಸಂವಿಧಾನ 22 ಭಾಷೆಗಳಿಗೆ ಅಧಿಕೃತ ಸಮಾನ ಸ್ಥಾನಮಾನವನ್ನು ನೀಡಿದ್ದು, 22 ಭಾಷೆಗಳೂ ದೇಶದ ಅಧಿಕೃತ ಆಡಳಿತ ಭಾಷೆಗಳು ಎಂದೇ ಘೋಷಿಸಲಾಗಿದೆ. ಇದರರ್ಥ, ಹಿಂದಿ ಕೂಡಾ ಒಂದು ಭಾಷೆಯಾಗಿದೆಯೇ ಹೊರತು ರಾಷ್ಟ್ರಭಾಷೆ ಅಲ್ಲ. ಭಾರತವು ಒಂದು ಒಕ್ಕೂಟ ವ್ಯವಸ್ಥೆಯಾಗಿದ್ದು ಇಲ್ಲಿನ ಸ್ಥಳೀಯ ಭಾಷೆಗಳೇ ಆಯಾ ರಾಜ್ಯಗಳ ಆಡಳಿತ ಭಾಷೆಗಳಾಗಿವೆ.

ಮತ್ತೊಂದು ಆಘಾತಕರ ವಿಷಯ; ಉತ್ತರ ಕನ್ನಡದ ಬ್ಯಾಂಕೊಂದು ಗ್ರಾಹಕರೊಬ್ಬರು ನೀಡಿದ್ದ ಚೆಕ್ ಕನ್ನಡದಲ್ಲಿದ್ದ ಕಾರಣಕ್ಕೆ ಅಮಾನ್ಯ ಮಾಡಿದ್ದಾರೆ. ಇದನ್ನು ಪ್ರಶ್ನಿಸಿ ಅವರು ಸ್ಥಳೀಯ ಗ್ರಾಹಕರ ವ್ಯಾಜ್ಯಗಳ ಆಯೋಗದ ಮೊರೆ ಹೋಗಿ ಪರಿಹಾರ ಪಡೆದಿದ್ದಾರೆ ಹಾಗೂ ಆಯೋಗ ಸದರಿ ಬ್ಯಾಂಕಿಗೆ ದಂಡ ವಿಧಿಸಿರುವುದು ಸರಿಯಾದ ಕ್ರಮವಾಗಿದೆ.

ಇಲ್ಲಿ ನಾವು ಅರ್ಥ ಮಾಡಿಕೊಳ್ಳಬೇಕಿರುವುದು, ಕನ್ನಡ ನಮ್ಮ ಆಡಳಿತ ಭಾಷೆ. ಕನ್ನಡಿಗರಾಗಿ ಕನ್ನಡ ಬಳಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಇದನ್ನು ಬ್ಯಾಂಕುಗಳೂ ಅರ್ಥ ಮಾಡಿಕೊಳ್ಳಬೇಕಿದೆ.

ಮುಂದಿನ ದಿನಗಳಲ್ಲಿ ಬ್ಯಾಂಕುಗಳಲ್ಲಿ ಆಯಾ ರಾಜ್ಯ ಭಾಷೆ ಮಾತನಾಡುವ ಸಿಬ್ಬಂದಿ ನೇಮಕಾತಿ ಆಗುವಂತೆ ನೋಡಿಕೊಳ್ಳಬೇಕು. ಬೇರೆ ಭಾಷಿಕರು ನೇಮಕವಾದರೂ,ಅವರು ಸ್ಥಳೀಯ ಭಾಷೆಯನ್ನು ಕಲಿತು ವ್ಯವಹರಿಸುವಂತೆ ನೋಡಿಕೊಳ್ಳಬೇಕು. ಮುಖ್ಯವಾಗಿ ನೇಮಕಾತಿಗಳಲ್ಲಿ ಸ್ಥಳೀಯ ಭಾಷಿಕರನ್ನು ಆಯ್ಕೆ ಮಾಡಿಕೊಳ್ಳಬೇಕು. ದೇಶದಲ್ಲಿನ ಭಾಷಾ ವೈವಿಧ್ಯತೆಯನ್ನು ಬ್ಯಾಂಕುಗಳು ಅರಿತು ಇದನ್ನು ಅನುಸರಿಸುವುದು ಅಗತ್ಯವಾಗಿದೆ ಎಂದು ನಾನು ಅಭಿಪ್ರಾಯಪಡುತ್ತೇನೆ.

▸▸ ಎಚ್.ಕೆ. ಪಾಟೀಲ
ಅಧ್ಯಕ್ಷರು

## 2023ಕ್ಕೆ ಆರ್ಥಿಕ ಹಿಂಜರಿತ : ವಿಶ್ವಬ್ಯಾಂಕ್ ಎಚ್ಚರಿಕೆ




**ಹೊಸದಿಲ್ಲಿ** : ವಿಶ್ವದಾದ್ಯಂತ ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿದರ ಏರಿಕೆ ಮುಂತಾದ ಬಿಗಿ ವಿತ್ತೀಯ ಕ್ರಮಗಳ ಮೊರೆ ಹೋಗುತ್ತಿರುವುದರ ಹಿನ್ನೆಲೆಯಲ್ಲಿ ಮುಂದಿನ ವರ್ಷ ಆರ್ಥಿಕ ಹಿಂಜರಿತ ಕಾಡಬಹುದು ಎಂದು ವಿಶ್ವಬ್ಯಾಂಕ್ ಎಚ್ಚರಿಸಿದೆ.

ವರದಿಯೊಂದರಲ್ಲಿ ಈ ವಿಷಯವನ್ನು ಉಲ್ಲೇಖಿಸಿರುವ ವಿಶ್ವಬ್ಯಾಂಕ್, ಭಾರತ ಸೇರಿದಂತೆ ಅಭಿವೃದ್ಧಿಶೀಲ ದೇಶಗಳಿಗೆ ಇದರ ಬಿಸಿ ಹೆಚ್ಚಾಗಿ ತಟ್ಟಲಿದೆ ಎಂದು ಹೇಳಿದೆ. ಇದೇ ವೇಳೆ, ಹಣದುಬ್ಬರಕ್ಕೆ ಕಡಿವಾಣ ಹಾಕಲು ಉತ್ಪಾದನೆ ಹೆಚ್ಚಳ ಹಾಗೂ ಪೂರೈಕೆ ಸರಪಳಿ ಅಡಚಣೆ ನಿರ್ಮೂಲನೆಯಂತಹ ಕ್ರಮಗಳನ್ನು ಕೈಗೊಳ್ಳಲು ಸಲಹೆ ನೀಡಿದೆ.

ಜಾಗತಿಕವಾಗಿ ಹಣದುಬ್ಬರ ಗಗನಮುಖಿ ಯಾಗಿದ್ದು, ಅದನ್ನು ಕೋವಿಡ್ ಸಾಂಕ್ರಾಮಿಕದ ಪೂರ್ವ ಸ್ಥಿತಿಗೆ ತರಲು ಈಗ ಕೈಗೊಳ್ಳುತ್ತಿರುವ ಕ್ರಮಗಳು ಸಾಕಾಗುವುದಿಲ್ಲ. 2023ರಲ್ಲೂ ಆರ್‌ಬಿಐ ಸೇರಿದಂತೆ ಕೇಂದ್ರೀಯ ಬ್ಯಾಂಕ್‌ಗಳ ಬಿಗಿ ಕ್ರಮಗಳು ಮುಂದುವರಿಯುತ್ತವೆ. ಹೀಗಾಗಿ ಜಾಗತಿಕ ಮಟ್ಟದಲ್ಲಿ ಬಡ್ಡಿದರಗಳು ಶೇ.4ರವರೆಗೂ ಹೆಚ್ಚಳವಾಗಬಹುದು. ಆದರೆ, ಈ ಕ್ರಮಗಳಿಗೆ ಆರ್ಥಿಕ ಹಿಂಜರಿತದ ರೂಪದಲ್ಲಿ ಬೆಲೆ ತೆರಬೇಕಾಗುತ್ತದೆ. 1970ರ ಆರ್ಥಿಕ ಹಿಂಜರಿತದ ನಂತರ ವಿಶ್ವ ಮತ್ತೆ ದಿಢೀರ್ ಹಿಂದಡಿ ಇಡುವ ಸನ್ನಿವೇಶ ಸೃಷ್ಟಿಯಾಗಿದೆ. ಈಗಾಗಲೇ ಇದರ ಸುಳಿವುಗಳು ಕಂಡುಬರುತ್ತಿವೆ ಎಂದು ವಿಶ್ವಬ್ಯಾಂಕ್ ಹೇಳಿದೆ.

ಹಣದುಬ್ಬರ ಅಂಕುಶಕ್ಕೆ ಕೈಗೊಂಡ ವಿತ್ತೀಯ ನಿಯಂತ್ರಣದ ಬಿಗಿ ಕ್ರಮಗಳಿಂದ ಬಂಡವಾಳ ಹೂಡಿಕೆ ಕುಸಿಯಬಹುದು, ಉದ್ಯೋಗ ನಷ್ಟವಾಗಬಹುದು. ಜತೆಗೆ ಆರ್ಥಿಕ ಬೆಳವಣಿಗೆಗೆ ಅಡ್ಡಿಯಾಗುವ ಅಪಾಯವಿದೆ ಎಂದು ಎಚ್ಚರಿಸಿದೆ.

## ಅರಣ್ಯ ಸಚಿವ; ಸಹಕಾರಿ ಮುಖಂಡ ಉಮೇಶ್ ಕತ್ತಿ ನಿಧನ



**ಬೆಂಗಳೂರು :** ರಾಜ್ಯದ ಹಿರಿಯ ಸಹಕಾರಿ ಮುಖಂಡರು, ಆಹಾರ ಮತ್ತು ನಾಗರಿಕ ಪೂರೈಕೆ ಹಾಗೂ ಅರಣ್ಯ ಖಾತೆ ಸಚಿವರು ಆಗಿದ್ದ ಉಮೇಶ್ ಕತ್ತಿ ಅವರು ಸೆಪ್ಟೆಂಬರ್ 6 ರಂದು ಹೃದಯಾಘಾತದಿಂದ ನಿಧನರಾದರು.

1961ರ ಮಾರ್ಚ್ 14ರಂದು ಹುಕ್ಕೇರಿ ತಾಲೂಕಿನ ಬೆಲ್ಲದ ಬಾಗೇವಾಡಿ ಗ್ರಾಮದ ಕತ್ತಿ ಮನೆತನದಲ್ಲಿ ಹಿರಿಯ ಸಹಕಾರಿ ವಿಶ್ವನಾಥ ಹಾಗೂ ರಾಜೇಶ್ವರಿ ದಂಪತಿಗಳ ಹಿರಿಯ ಪುತ್ರನಾಗಿ ಜನಿಸಿದ ಕತ್ತಿ, 25ನೇ ವಯಸ್ಸಿನಲ್ಲೇ 1985ರಲ್ಲಿ ಮೊದಲ ಬಾರಿಗೆ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲುವಿನ ನಗೆ ಬೀರಿದ್ದರು. 62 ವರ್ಷ ವಯಸ್ಸಿನ ಉಮೇಶ ಕತ್ತಿ ಅವರು ಸಹಕಾರ ಕ್ಷೇತ್ರ ಹಾಗೂ ಸಕ್ಕರೆ ಕಾರ್ಖಾನೆಗಳ ಅಭಿವೃದ್ಧಿಯಲ್ಲಿ ಅವರ ಪಾತ್ರ ದೊಡ್ಡದು.

ಇವರ ತಂದೆ ವಿಶ್ವನಾಥ ಕತ್ತಿ ಬೆಳಗಾವಿ ಜಿಲ್ಲೆಯಲ್ಲೇ ಸಹಕಾರ ಚಳವಳಿ ಆರಂಭಿಸಿದವರು. ಉಮೇಶ ಕತ್ತಿ, ರಮೇಶ ಕತ್ತಿ ಸಹ ಆರಂಭದಲ್ಲಿ ಸಹಕಾರಿ ಚಳವಳಿ ಜೊತೆಗೆ ಸಾಮಾಜಿಕ ಚಟುವಟಿಕೆ ಆರಂಭಿಸಿದ್ದರು.

ಇವರು ಪ್ರತಿನಿಧಿಸಿದ ಸಹಕಾರ ಸಂಘಗಳೆಲ್ಲ ಇಂದು ರಾಜ್ಯದ ಮಾದರಿ ಸಹಕಾರಿ ಸಂಸ್ಥೆಗಳಾಗಿ ಗುರುತಿಸಲ್ಪಡುತ್ತಿವೆ. ಸಂಕೇಶ್ವರದ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆ, ಬೆಲ್ಲದ ಬಾಗೇವಾಡಿ ಸಹಕಾರಿ ಸಂಸ್ಥೆ, ರಾಜ್ಯಕ್ಕೆ ಮಾದರಿ ಎನಿಸಿರುವ ಹುಕ್ಕೇರಿ ಗ್ರಾಮೀಣ ಸಹಕಾರ ವಿದ್ಯುತ್ ಸಂಘ, ಬೆಳಗಾವಿಯ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಬೆಳಗಾವಿ ಹಾಲು ಒಕ್ಕೂಟ ಇವುಗಳು ಮಾದರಿ ಸಂಸ್ಥೆಗಳೆನಿಸಿವೆ.

ಇವರ ನಿಧನಕ್ಕೆ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರವರು, ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯನವರು ಹಾಗೂ ಆಡಳಿತ ಮಂಡಳಿ ಸದಸ್ಯರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿ, ಸಿಬ್ಬಂದಿ ವರ್ಗದವರು ತೀವ್ರ ಸಂತಾಪ ವ್ಯಕ್ತಪಡಿಸಿ, ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು.

## ಗಣಪತಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಗೆ ಶಿವಮೊಗ್ಗ ಜಿಲ್ಲೆಯ ಅತ್ಯುತ್ತಮ ಬ್ಯಾಂಕ್ ಪ್ರಶಸ್ತಿ



**ಸಾಗರ :** ಶಿವಮೊಗ್ಗ ಜಿಲ್ಲೆಯ ಉತ್ತಮ ಬ್ಯಾಂಕ್ ಎಂದು ಪ್ರಶಸ್ತಿ ಹಾಗೂ 10,000 ರೂ.ಗಳನ್ನು ನೀಡಿ ಗಣಪತಿ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್, ಸಾಗರ ಈ ಬ್ಯಾಂಕಿಗೆ ಶಿವಮೊಗ್ಗ ಡಿ.ಸಿ.ಸಿ. ಬ್ಯಾಂಕ್ ವತಿಯಿಂದ ಫಲಕ ಮತ್ತು ನಗದನ್ನು ನೀಡಿ ಗೌರವಿಸಲಾಯಿತು. ಫಲಕವನ್ನು ಬ್ಯಾಂಕಿನ ಅಧ್ಯಕ್ಷರಾದ ದೇವೇಂದ್ರ ಬಿ. ಮತ್ತು ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಲಲಿತಾಂಬಿಕೆ ಬಿ. ಅವರಿಗೆ ನೀಡಲಾಯಿತು. ಈ ಸಂದರ್ಭದಲ್ಲಿ ಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಚನ್ನವೀರಪ್ಪಗೌಡ ಹಾಗೂ ಗಣಪತಿ ಬ್ಯಾಂಕ್‌ನ ನಿರ್ದೇಶಕರಾದ ಶೋಭಾ ಲಂಭೋದರ, ವಿನಾಯಕ ರಂಗಧೋಳ್, ಕೃಷ್ಣಮೂರ್ತಿ ಭಂಡಾರಿ, ಉದಯ ಕಾಮತ್, ರಮೇಶ ಚಂದ್ರಗುತ್ತಿ ಇನ್ನಿತರರು ಉಪಸ್ಥಿತರಿದ್ದರು.

## ದಿನಾಂಕ : 28.09.2022ರಂದು ಗುಲ್ಬರ್ಗಾದಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ನಿರ್ದೇಶಕರುಗಳಿಗೆ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ

**ಬೆಂಗಳೂರು :** ಮಹಾಮಂಡಳವು ದಿನಾಂಕ : 28.09.2022 ರಂದು ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ನಿರ್ದೇಶಕರುಗಳಿಗೆ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು "ಗ್ರ್ಯಾಂಡ್ ಹೋಟೇಲ್ ಪಬ್ಲಿಕ್ ಗಾರ್ಡನ್" ಗುಲ್ಬರ್ಗಾ ಇಲ್ಲಿ ಏರ್ಪಡಿಸಲಾಗಿದೆ. ಈ ವಿಚಾರ ಸಂಕಿರಣದಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಅಧ್ಯಕ್ಷರ ಮತ್ತು ನಿರ್ದೇಶಕ ಮಂಡಳಿಯ ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಪಾತ್ರ ಹಾಗೂ ಬ್ಯಾಂಕಿನ ಬೆಳವಣಿಗೆಗೆ ಅವಶ್ಯವಿರುವ ವಿಷಯಗಳನ್ನು ಸಂಗ್ರಹಿಸಿ ನುರಿತ ತಜ್ಞರುಗಳಿಂದ ಉಪನ್ಯಾಸ ನೀಡಲಾಗುವುದು.

ತಾವು ಕೂಡಲೇ ತಮ್ಮ ಬ್ಯಾಂಕಿನ ಪ್ರತಿನಿಧಿಗಳ ಹೆಸರುಗಳನ್ನು ಮಹಾಮಂಡಳದಲ್ಲಿ ದಿನಾಂಕ : 23.09.2022ರೊಳಗಾಗಿ ನೋಂದಾಯಿಸಿಕೊಳ್ಳಬೇಕೆಂದು ಈ ಮೂಲಕ ಕೋರಲಾಗಿದೆ. ಈ ವಿಚಾರ ಸಂಕಿರಣದಲ್ಲಿ ತಮ್ಮ ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರುಗಳು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಭಾಗವಹಿಸಿ, ಈ ವಿಚಾರ ಸಂಕಿರಣದ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ಯವರು ಕೋರಿರುತ್ತಾರೆ. ಈ ವಿಚಾರ ಸಂಕಿರಣಕ್ಕೆ ಸಂಬಂಧಿಸಿದ ಸುತ್ತೋಲೆಯನ್ನು ಈಗಾಗಲೇ ತಮ್ಮ ಬ್ಯಾಂಕಿನ ಇ–ಮೇಲ್ ವಿಳಾಸಕ್ಕೆ ಕಳುಹಿಸಲಾಗಿದೆ.

## ನಾರಾಯಣಗುರು ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ, ಉಡುಪಿ : ವಾರ್ಷಿಕ ಮಹಾಸಭೆ




**ಉಡುಪಿ :** ನಾರಾಯಣಗುರು ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಲಿ, ಉಡುಪಿ, ಇದರ 2021 – 2022ನೇ ಸಾಲಿನ 20ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯು 11.09.2022ರಂದು ಬಿಲ್ಲವರ ಸೇವಾ ಸಂಘ (ರಿ), ಬನ್ನಂಜೆ ಉಡುಪಿ ಇದರ ಶಿವಗಿರಿ ಸಭಾಂಗಣದಲ್ಲಿ ಅಧ್ಯಕ್ಷರಾದ ಹರಿಶ್ಚಂದ್ರ ಅಮೀನ್ ಇವರ ಅಧ್ಯಕ್ಷತೆಯಲ್ಲಿ ಜರುಗಿತು.

ವಾರ್ಷಿಕ ಸಾಮಾನ್ಯ ಸಭೆಯನ್ನು ಬ್ಯಾಂಕಿನ ಮಾರ್ಗದರ್ಶಕರಾದ ಎಸ್.ಕೆ. ಸಾಲ್ಯಾನ್, ರಾಮಚಂದ್ರ ಕಿದಿಯೂರು ಮತ್ತು ಸೂರ್ಯ ಪ್ರಕಾಶ್ ಜಂಟಿಯಾಗಿ ಉದ್ಘಾಟಿಸಿ ಶುಭ ಹಾರೈಸಿದರು.

ಉಪಾಧ್ಯಕ್ಷರಾದ ವಿಜಯಾ ಜಿ ಬಂಗೇರ ಪ್ರಾಸ್ತಾವಿಕದ ಮೂಲಕ ವೇದಿಕೆಗೆ ಬರಮಾಡಿಕೊಂಡರು. ನಿರ್ದೇಶಕರಾದ ಕೆ. ಜಯಕುಮಾರ್, ಪ್ರಭಾಕರ ಬಂಗೇರ ಬಿ.ಬಿ. ಪೂಜಾರಿ, ನವೀನ್ ಅಮೀನ್, ಆನಂದ ಜತ್ತನ್ನ, ಡಿ.ಆರ್ ರಾಜು, ಶೇಕರ ಬಿ ಪೂಜಾರಿ, ರಮೇಶ್ ಕೆ ಕೋಟ್ಯಾನ್, ಅಶೋಕ್ ಕುಮಾರ್, ಅರಣ್ ಜತ್ತನ್ನ ವೃತ್ತಿಪರ ನಿರ್ದೇಶಕರಾದ ಬಾಸ್ಕರ ಪೂಜಾರಿ ಹಾಗೂ ಕೃಷ್ಣ ಬಿಲ್ಲವ ಸಭೆಯಲ್ಲಿ ಉಪಸ್ಥಿತರಿದ್ದರು.

ಸದಸ್ಯರಾದ ಗುರದತ್ ಅಮೀನ್, ಕಟಪಾಡಿ ಶಂಕರ್ ಪೂಜಾರಿ, ರಮೇಶ್ ಬಂಗೇರ, ಶೇಖರ್ ಕೋಟ್ಯಾನ್ ಮತ್ತು ಸುಲೋಚನಾ ದಾಮೋದರ್ ಇವರು ಬ್ಯಾಂಕಿನ ಅಭಿವೃದ್ಧಿಯ ಬಗ್ಗೆ ಸಲಹೆ ಸೂಚನೆಗಳನ್ನು ನೀಡಿ ಬ್ಯಾಂಕನ್ನು ಲಾಭದತ್ತ ಮುನ್ನಡೆಸಿದ ಆಡಳಿತ ಮಂಡಳಿಯನ್ನು ಅಭಿನಂದಿಸಿದರು.

ಬ್ಯಾಂಕಿನ ನಿರ್ದೇಶಕರಾದ ಶಕುಂತಲ ಶ್ರೀನಿವಾಸ್ ಪ್ರಾರ್ಥಿಸಿ, ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರೋಶನ್ ಫೌಸ್ಟಿನ್ ಆಲ್ವರವರು ಬ್ಯಾಂಕಿನ 19ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ವರದಿಯನ್ನು ವಾಚಿಸಿದರು. ನಿರ್ದೇಶಕ ಶಿವಾಜಿ ಸುವರ್ಣ ಅವರು ಧನ್ಯವಾದವಿತ್ತರು.

## ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್ : 116ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆ



**ಮೈಸೂರು :** ದಿನಾಂಕ : 11.09.2022ರಂದು ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕಿನ 2021–2022ನೇ ಸಾಲಿನ 116ನೇ ವರ್ಷದ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ಬ್ಯಾಂಕಿನ ಆಡಳಿತ ಮಂಡಲಿಯವರು ದೀಪ ಬೆಳಗಿಸುವುದರೊಂದಿಗೆ ಸಭೆಯನ್ನು ಪ್ರಾರಂಭಿಸಿದರು. ಈ ಸಂದರ್ಭದಲ್ಲಿ ಅಧ್ಯಕ್ಷರಾದ ಶ್ರೀ ಸಿ.ರೇವಣ್ಣ ರವರು, ಉಪಾಧ್ಯಕ್ಷರಾದ ಶ್ರೀ ಜೆ.ಯೋಗೇಶ್, ಆಡಳಿತ ಮಂಡಲಿ ನಿರ್ದೇಶಕರಾದ ಶ್ರೀಆರ್.ರವಿಕುಮಾರ್ (ರಾಜಕೀಯ), ಶ್ರೀ ಎಸ್.ಬಿ.ಎಂ.ಮಂಜು, ಶ್ರೀ ಹೆಚ್. ಹರೀಶ್‌ಕುಮಾರ್, ಶ್ರೀ ಕೆ.ಉಮಾಶಂಕರ್, ಶ್ರೀ ಎಸ್.ಸೋಮಣ್ಣ, ಶ್ರೀ ಎಸ್.ಅರವಿಂದ ಶ್ರೀ ಎ.ಮಂಚಪ್ಪ, ಶ್ರೀ ಎಂ.ರಾಮಕೃಷ್ಣ, ಶ್ರೀ ಆರ್.ರವಿಕುಮಾರ್, ಶ್ರೀಮತಿ ಪಿ.ರಾಜೇಶ್ವರಿ, ಶ್ರೀಮತಿ ಪಿ.ಸವಿತಾ ಹಾಗೂ ವೃತ್ತಿಪರ ನಿರ್ದೇಶಕರಾದ ಶ್ರೀ ಎಂ.ವೈ.ರಮೇಶ್‌ಗೌಡ, ಶ್ರೀ ಸಿ.ಎಸ್.ರಾಮಕೃಷ್ಣಯ್ಯ ಉಪಸ್ಥಿತರಿದ್ದರು.

## ಮತ್ತೆ ಏರಿಕೆಯ ಹಾದಿಗೆ ಚಿಲ್ಲರೆ ಹಣದುಬ್ಬರ

**ನವದೆಹಲಿ :** ಮೂರು ತಿಂಗಳುಗಳಿಂದ ಇಳಿಕೆಯ ಹಾದಿಯಲ್ಲಿ ಇದ್ದ ಚಿಲ್ಲರೆ ಹಣದುಬ್ಬರ ದರವು ಆಗಸ್ಟ್‌ನಲ್ಲಿ ಶೇ.7ಕ್ಕೆ ಏರಿಕೆ ಆಗಿದೆ. ಆಹಾರ ವಸ್ತುಗಳ ಬೆಲೆ ಹೆಚ್ಚಳವು ಹಣದುಬ್ಬರ ಏರಿಕೆಗೆ ಕಾರಣ. ಹಣದುಬ್ಬರಕ್ಕೆ ಕಡಿವಾಣ ಹಾಕಲು, ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಈ ತಿಂಗಳಲ್ಲಿ ರೆಪೊ ದರವನ್ನು ಮತ್ತೆ ಹೆಚ್ಚಿಸುವ ಸಾಧ್ಯತೆ ಇದೆ.

ಆರ್‌ಬಿಐ ರೆಪೊ ದರವನ್ನು ತೀರ್ಮಾನಿಸುವಾಗ ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಗಣನೆಗೆ ತೆಗೆದುಕೊಳ್ಳುತ್ತದೆ. ದೇಶದಲ್ಲಿ ಚಿಲ್ಲರೆ ಹಣದುಬ್ಬರ ದರವು ಸತತ ಎಂಟು ತಿಂಗಳುಗಳಿಂದ ಗರಿಷ್ಠ ಮಿತಿಯನ್ನು (ಶೇ.6) ಮೀರಿದೆ. ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಶೇ.6 ರೊಳಗೆ ಇರಿಸಬೇಕಾದ ಹೊಣೆ ಆರ್‌ಬಿಐ ಮೇಲಿದೆ. ಜುಲೈನಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣ ಶೇ.6.71ರಷ್ಟಾಗಿತ್ತು. ಹಿಂದಿನ ವರ್ಷದ ಆಗಸ್ಟ್‌ನಲ್ಲಿ ಶೇ.5.3ರಷ್ಟು ಇತ್ತು. ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ನೇತೃತ್ವದ ಹಣಕಾಸು ನೀತಿ ಸಮಿತಿಯ ಸಭೆಯು ಈ ತಿಂಗಳ 28ರಿಂದ 30ರವರೆಗೆ ಸಭೆ ನಡೆಯಲಿದೆ. ಈ ಸಭೆಯಲ್ಲಿ ರೆಪೊ ದರ ಏರಿಕೆ ಕುರಿತು ತೀರ್ಮಾನವಾಗುತ್ತದೆ. ಹಣದುಬ್ಬರವನ್ನು ನಿಯಂತ್ರಿಸುವ ಉದ್ದೇಶದಿಂದ ಆರ್‌ಬಿಐ ಈ ವರ್ಷದಲ್ಲಿ ರೆಪೊ ದರವನ್ನು ಒಟ್ಟು ಶೇ.1.40ರಷ್ಟು ಹೆಚ್ಚಿಸಿದೆ. ಸೆಪ್ಟೆಂಬರ್ ತಿಂಗಳ ಸಭೆಯಲ್ಲಿ ಹಣಕಾಸು ನೀತಿ ಸಮಿತಿಯ ರೆಪೊ ದರವನ್ನು ಶೇ.0.50ರಷ್ಟು ಹೆಚ್ಚಿಸುವ ನಿರೀಕ್ಷೆ ಇದೆ ಎಂದು ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

ರೆಪೊ ದರವನ್ನು ಇನ್ನಷ್ಟು ಹೆಚ್ಚಿಸುವ ಮೂಲಕ, ಠೇವಣಿಗಳಿಗೆ ಈಗ ಸಿಗುತ್ತಿರುವ ನಕಾರಾತ್ಮಕ ವಾಸ್ತವ ಬಡ್ಡಿಯ ಸಮಸ್ಯೆಯನ್ನು ಪರಿಹರಿಸಬಹುದು. ಅಕ್ಟೋಬರ್ ನಂತರದಲ್ಲಿ ಹಣದುಬ್ಬರ ಪ್ರಮಾಣವು ಕಡಿಮೆ ಆಗಬಹುದು ಎಂದು ಆರ್‌ಬಿಐ ಮಾಜಿ ಕಾರ್ಯನಿರ್ವಾಹಕ ನಿರ್ದೇಶಕ ಮೃದುಲ್ ಸಗ್ಗರ್ ಹೇಳಿದ್ದಾರೆ. ಹಣದುಬ್ಬರ ಪ್ರಮಾಣವನ್ನು ನಿರ್ಧರಿಸಲು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ನಗರ ಪ್ರದೇಶಗಳ 1,114 ಮಾರುಕಟ್ಟೆಗಳು ಹಾಗೂ ಗ್ರಾಮೀಣ ಪ್ರದೇಶಗಳ 1,181 ಮಾರುಕಟ್ಟೆಗಳಿಂದ ಅಂಕಿ–ಅಂಶಗಳನ್ನು ಸಂಗ್ರಹಿಸಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಚಿಲ್ಲರೆ ಹಣದುಬ್ಬರವು ಶೇ.7.15ರಷ್ಟಿದೆ, ನಗರ ಪ್ರದೇಶಗಳಲ್ಲಿ ಶೇ.6.72ರಷ್ಟಿದೆ.

**ಹಣದುಬ್ಬರ ಪ್ರಮಾಣ ಆಹಾರ ವಸ್ತುಗಳಲ್ಲಿ ಹೆಚ್ಚು**
**(ಬೆಲೆ ಏರಿಕೆಯನ್ನು ಶೇಕಡಾವಾರು ಪ್ರಮಾಣದಲ್ಲಿ ನೀಡಲಾಗಿದೆ)**

| | |
|---|---|
| ಸಾಂಬಾರ ಪದಾರ್ಥ | 14.90 |
| ತರಕಾರಿ | 13.23 |
| ಬಟ್ಟೆ, ಪಾದರಕ್ಷೆ | 9.91 |
| ಏಕದಳ ಧಾನ್ಯಗಳು ಮತ್ತು ಉತ್ಪನ್ನಗಳು | 9.7 |
| ಸಿದ್ಧಪಡಿಸಿದ ಊಟ, ಕುರಕಲು, ಸಿಹಿ | 7.75 |
| ಆಹಾರ, ಪಾನೀಯ | 7.57 |
| ಹಣ್ಣುಗಳು | 7.39 |
| ಹಾಲು ಮತ್ತು ಅದರ ಉತ್ಪನ್ನಗಳು | 6.39 |
| ಅಡುಗೆ ಎಣ್ಣೆ, ಕೊಬ್ಬಿನ ಪದಾರ್ಥ | 4.62 |
| ಮಾಂಸ, ಮೀನು | 0.98 |
| ಮೊಟ್ಟೆ | –4.57 |

## ಎಂ.ಸಿ.ಸಿ. ಬ್ಯಾಂಕಿನ ಮೂಡಬಿದ್ರಿ ಶಾಖೆಯ ಗ್ರಾಹಕ ಸಂಪರ್ಕ ಸಭೆ



ಬ್ಯಾಂಕಿನ ಶತಮಾನೋತ್ತರ ದಶಮಾನೋತ್ಸವದ ಅಂಗವಾಗಿ ಎಂ.ಸಿ.ಸಿ. ಬ್ಯಾಂಕ್, ಮೂಡಬಿದ್ರಿ ಶಾಖೆಯ ಗ್ರಾಹಕ ಸಂಪರ್ಕ ಸಭೆಯನ್ನು ಆಗಸ್ಟ್ 28ರ ಭಾನುವಾರದಂದು ಕೊರ್ಪುಸ್ ಕ್ರಿಸ್ತಿ ಚರ್ಚ್ ಸಭಾಭವನದಲ್ಲಿ ಸಂಜೆ 5 ಗಂಟೆಗೆ ಆಯೋಜಿಸಲಾಗಿತ್ತು.

ಮೂಡಬಿದ್ರಿ ಕೊರ್ಪುಸ್ ಕ್ರಿಸ್ತಿ ಚರ್ಚ್‌ನ ಪ್ರಧಾನ ಧರ್ಮಗುರು ವಂದನೀಯ ಫಾ। ಓನಿಲ್ ಡಿಸೋಜರವರು ಸಭೆಯನ್ನು ಉದ್ಘಾಟಿಸಿದರು. ಎಂ.ಸಿ.ಸಿ. ಬ್ಯಾಂಕಿನ ಅಧ್ಯಕ್ಷ ಅನಿಲ್ ಲೋಬೊ ರವರು ಸಂಪರ್ಕ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಕೆ.ಎಮ್.ಎಫ್. ಮಂಗಳೂರು ಇದರ ಅಧ್ಯಕ್ಷರಾದ ಕೆ. ಪಿ. ಸುಚರಿತ ಶೆಟ್ಟಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಲೇರಿಯನ್ ಸಿಕ್ವೇರಾ, ಕ್ರಿಶ್ಚಿಯನ್ ಅಭಿವೃದ್ಧಿ ಮಂಡಳಿಯ ನಿಕಟಪೂರ್ವ ಅಧ್ಯಕ್ಷ ಜೋಯ್ಲಸ್ ಡಿಸೋಜ, ಬ್ಯಾಂಕಿನ ಉಪಾಧ್ಯಕ್ಷ ಜೆರಾಲ್ಡ್ ಜೂಡ್ ಡಿಸಿಲ್ವಾ, ಉದ್ಯಮಿ ರೋಹನ್ ರಾಜೇಶ್ ಮಸ್ಕರೇನ್ಹಸ್, ಗೌರವ ಅತಿಥಿಗಳಾಗಿದ್ದರು.

ವಂದನೀಯ ಫಾ। ಓನಿಲ್ ಡಿಸೋಜರವರು ತಮ್ಮ ಉದ್ಘಾಟಣಾ ಭಾಷಣದಲ್ಲಿ ಸಮಾಜಕ್ಕೆ 110 ವರ್ಷಗಳ ನಿಸ್ವಾರ್ಥ ಸೇವೆಯನ್ನು ಸಲ್ಲಿಸಿದ ಬ್ಯಾಂಕಿನ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿಯನ್ನು ಅಭಿನಂದಿಸಿದರು. ಎಂಸಿಸಿ ಬ್ಯಾಂಕಿನಲ್ಲಿ ಗ್ರಾಹಕರ ಸೇವೆಯಲ್ಲಿ ಪಾರದರ್ಶಕತೆ ಇದೆ ಎಂದರು. ಎಂಸಿಸಿ ಬ್ಯಾಂಕಿನ ಅಧ್ಯಕ್ಷರ ನಾಯಕತ್ವದಿಂದ ಗ್ರಾಹಕರು ಸಮಾವೇಶಕ್ಕೆ ಹಾಜರಾಗಿದ್ದನ್ನು ನೋಡಿದ್ದಲ್ಲಿ ಬ್ಯಾಂಕಿನ ಮೇಲೆ ಗ್ರಾಹಕರಿಗೆ ಇರುವ ವಿಶ್ವಾಸವನ್ನು ತೋರಿಸುತ್ತದೆ ಎಂದು ಹೇಳಿ ಬ್ಯಾಂಕಿಗೆ ಶುಭ ಹಾರೈಸಿದರು. ನಿರ್ದೇಶಕರಾದ ಹೆರಾಲ್ಡ್ ಮೊಂತೇರೊ, ಐರಿನ್ ರೆಬೆಲ್ಲೊ, ಜೆ.ಪಿ.ರೊಡ್ರಿಗಸ್, ಡಾ। ಫ್ರೀಡಾ ಫ್ಲಾವಿಯ ಡಿಸೋಜ, ವೃತ್ತಿಪರ ನಿರ್ದೇಶಕರಾದ ಸುಶಾಂತ್ ಸಿ.ಎ. ಸಲ್ಡಾನ್ಹಾ, ವ್ಯವಸ್ಥಾಪನ ಸಮಿತಿಯ ಸದಸ್ಯರಾದ, ಫೆಲಿಕ್ಸ್ ಡಿಕ್ರೂಜ್, ಆಲ್ವಿನ್ ಪಿ. ಮೊಂತೇರೊ ಹಾಜರಿದ್ದರು. ಮಹಾಪ್ರಬಂಧಕ ಸುನಿಲ್ ಮಿನೇಜಸ್ ಗ್ರಾಹಕರ ಸಭೆಯ ಮಹತ್ವವನ್ನು ವಿವರಿಸಿದರು. ಶಾಖಾ ಸಹಾಯಕ ನಿರ್ದೇಶಕರಾದ ಅಂಡ್ರು ಡಿಸೋಜರವರು ಸ್ವಾಗತಿಸಿ, ಶಾಖಾ ವ್ಯವಸ್ಥಾಪಕ ಲ್ಯಾನ್ಸಿ ಲೋಬೊ ವಂದಿಸಿದರು. ಮನೋಹರ್ ಕುಟಿನ್ಹಾ ಕಾರ್ಯಕ್ರಮ ನಿರೂಪಿಸಿದರು.

## ತಾವರಗೇರಾ ಪಟ್ಟಣ ಸಹಕಾರ ಬ್ಯಾಂಕ್ : 26ನೇ ವಾರ್ಷಿಕ ಮಹಾಸಭೆ







**ತಾವರಗೇರಾ :** ತಾವರಗೇರಾ ಪಟ್ಟಣ ಸಹಕಾರ ಬ್ಯಾಂಕಿನ 26ನೇ ವಾರ್ಷಿಕ ಮಹಾಸಭೆಯು ದಿನಾಂಕ 02-09-2022 ರಂದು ಶ್ರೀ ವೆಂಕಟೇಶ್ವರ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮಲ್ಲನಗೌಡ ಬಿ ಓಲಿ ಇವರು ಅಧ್ಯಕ್ಷತೆಯಲ್ಲಿ ಜರುಗಿತು.

ಸಭೆಯಲ್ಲಿ ಅತಿಥಿಗಳಾಗಿ ಶ್ರೀ ಶೇಖರಗೌಡ ಪೋಲಿಸ ಪಾಟೀಲ್, ಶ್ರೀಮತಿ ವೈಶಾಲಿ ಝಳಕಿ ಪಿ.ಎಸ್.ಐ ತಾವರಗೇರಾ. ಶ್ರೀಮತಿ ಬಸ್ಸಮ್ಮ ಕುಂಟೋಜಿ ಭಾಗವಹಿಸಿ ಬ್ಯಾಂಕಿನ ಕಾರ್ಯಾಚರಣೆಯನ್ನು ಶ್ಲಾಘಿಸಿದರು. ಸಭೆಯಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಶರಣಪ್ಪ ಜೆ ಐಲಿ ಹಾಗೂ ಬ್ಯಾಂಕಿನ ಎಲ್ಲಾ ನಿರ್ದೇಶಕರು, ವೃತ್ತಿಪರ ನಿರ್ದೇಶಕರು, ಬಿ.ಓ.ಎಮ್. ಸದಸ್ಯರು ಹಾಗೂ ಬ್ಯಾಂಕಿನ ಅನೇಕ ಸದಸ್ಯರು ಹಾಜರಿದ್ದರು.

ವಾರ್ಷಿಕ ಮಹಾಸಭೆಯಲ್ಲಿ ಸ್ಥಳೀಯ ಶಾಲಾ ಕಾಲೇಜಿನ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ.ಯಲ್ಲಿ ಅತೀ ಹೆಚ್ಚು ಅಂಕ ಪಡೆದ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಬ್ಯಾಂಕಿನ 15 ಜನ ಉತ್ತಮ ಗ್ರಾಹಕರಿಗೆ ಸನ್ಮಾನ ಕಾರ್ಯಕ್ರಮ ನೆರವೇರಿಸಲಾಯಿತು.

## ತಾಳಿಕೋಟಿ ಸಹಕಾರಿ ಬ್ಯಾಂಕಿನ 63ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆ



ತಾಳಿಕೋಟಿ ಸಹಕಾರಿ ಬ್ಯಾಂಕಿನ 63ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆ ದಿನಾಂಕ 17.09.2022ರ ಶನಿವಾರದಂದು ಅಡತ ಮರ್ಚಂಟ್ಸ ಅಸೋಸಿಯೇಶನ್ ಸಭಾಭವನದಲ್ಲಿ (ಎ.ಪಿ.ಎಂ.ಸಿ. ಯಾರ್ಡ) ಬ್ಯಾಂಕಿನ ಅಧ್ಯಕ್ಷರಾದ ಶ್ರೀ ವ್ಹಿ.ಎ. ಹಜೇರಿ ಇವರ ಅಧ್ಯಕ್ಷತೆಯಲ್ಲಿ ಅತ್ಯಂತ ಯಶಸ್ವಿಯಾಗಿ ಜರುಗಿತು.

ಜ್ಯೋತಿ ಬೆಳಗುವದರೊಂದಿಗೆ ಮಹಾ ಸಭೆಯ ಕಾರ್ಯಕ್ರಮಗಳು ವಿದ್ಯುಕ್ತವಾಗಿ ಪ್ರಾರಂಭಗೊಂಡವು. ಕೋವಿಡ್ ಸಮಯದಲ್ಲಿ ಬ್ಯಾಂಕಿನ ಪರವಾಗಿ ತಾಳಿಕೋಟಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ಎರಡು ಆಕ್ಸಿಜನ್ ಕನ್ಸಂಟ್ರೇಟರ್‌ಗಳನ್ನು ಕೊಡುಗೆ ನೀಡಿದ್ದಲ್ಲದೇ ಆಗಸ್ಟ್ 2022 ರಲ್ಲಿ ಜನಸಾಮಾನ್ಯರಿಗೆ ಅನುಕೂಲವಾಗಲೆಂದು ಎರಡು ಬಸ್ ಶೆಲ್ಟರ್‌ಗಳನ್ನು ಕೊಡುಗೆಯಾಗಿ ನೀಡಿದ್ದನ್ನು ವರದಿವಾಚನದಲ್ಲಿ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಬಿ.ಕೆ. ಮಣ್ಣೂರ ಇವರು ಎಲ್ಲ ಸದಸ್ಯರಿಗೆ ಮಾಹಿತಿ ನೀಡಿದರು. ಸನ್ 2021-22ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ಪರೀಕ್ಷೆಯಲ್ಲಿ ಅತ್ಯಂತ ಹೆಚ್ಚು ಅಂಕಗಳನ್ನು ಪಡೆದ ಷೇರುದಾರರ ಮಕ್ಕಳಿಗೆ "ಪ್ರತಿಭಾ ಪುರಸ್ಕಾರ" ದಡಿಯಲ್ಲಿ ನಗದು ಬಹುಮಾನ ನೀಡಿ ಸನ್ಮಾನಿಸಲಾಯಿತು. ಇದರಿಂದ ಪ್ರೇರಣೆ ಪಡೆದ ಮಕ್ಕಳಿಗೂ ಸಹ ಮುಂದೆ ಇನ್ನೂ ಹೆಚ್ಚಿನ ಸಾಧನೆ ಮಾಡಲು ಪ್ರೇರಣೆಯಾಯಿತು.

ಈ ಸಮಾರಂಭಕ್ಕೆ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಭಾಗಿಯಾಗಿದ್ದರು. ಬ್ಯಾಂಕಿನ ಆಡಳಿತ ಮಂಡಳಿಯ ನಿರ್ದೇಶಕರೆಲ್ಲರೂ ವೇದಿಕೆಯ ಮೇಲೆ ಆಸೀನರಾಗಿ ಸಭೆಯಲ್ಲಿ ಪಾಲ್ಗೊಂಡಿದ್ದರು.

## ಪೊನ್ನಂಪೇಟೆ ಪಟ್ಟಣ ಸಹಕಾರ ಬ್ಯಾಂಕ್ : 71ನೇ ವಾರ್ಷಿಕ ಮಹಾಸಭೆ



ಪೊನ್ನಂಪೇಟೆ ಪಟ್ಟಣ ಸಹಕಾರ ಬ್ಯಾಂಕು ತನ್ನ 71ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ:10.09.2022ರಂದು ಬ್ಯಾಂಕಿನ ಅಧ್ಯಕ್ಷರಾದ ಚಿರಿಯಪಂಡ ಕೆ. ಉತ್ತಪ್ಪ ನವರ ಅಧ್ಯಕ್ಷತೆಯಲ್ಲಿ ಜರುಗಿತು. ಮಹಾಸಭೆಯಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಕೋಳೇರ ದಯಾ ಚಂಗಪ್ಪ ಹಾಗೂ ನಿರ್ದೇಶಕರುಗಳಾದ ಶ್ರೀ ಮುಕ್ಕಾಟೀರ ಪಿ. ಅಪ್ಪಚ್ಚು, ಶ್ರೀ ಸಿ.ಎಸ್. ಉತ್ತಪ್ಪ, ಶ್ರೀ ಸಿ.ಕೆ. ದೇವಯ್ಯ, ಶ್ರೀ ಸಿ.ಎಂ. ಪೊನ್ನಪ್ಪ, ಶ್ರೀ ಟಿ.ಪಿ. ಗಣೇಶ್, ಶ್ರೀ ಎಂ.ಬಿ. ನಂಜಪ್ಪ, ಶ್ರೀ ಪಿ.ಎ.ಅಜೀಜ್, ಶ್ರೀಮತಿ ಎಂ. ಬೀಟಾ ಲಕ್ಷ್ಮಣ, ಶ್ರೀಮತಿ ಎಂ.ಎಸ್.ದೇವಕ್ಕಿ, ಶ್ರೀ ಹೆಚ್.ಎ.ಪ್ರಭು, ಶ್ರೀಮತಿ ಕೆ.ಟಿ. ಸುವಿನ್ ಹಾಗೂ ವ್ಯವಸ್ಥಾಪಕರಾದ ಶ್ರೀಮತಿ ಟಿ.ಟಿ. ಶಕುನ ರವರು ಉಪಸ್ಥಿತರಿದ್ದರು.

## ಉಡುಪಿ ಕೋ-ಆಪರೇಟಿವ್ ಟೌನ್ ಬ್ಯಾಂಕ್ ಮಹಾಸಭೆ : 2021-22ನೇ ಸಾಲಿನಲ್ಲಿ '2103.65 ಕೋಟಿ ವ್ಯವಹಾರ




ಉಡುಪಿ ಕೋ-ಆಪರೇಟಿವ್ ಟೌನ್ ಬ್ಯಾಂಕಿನ 110ನೇ ವಾರ್ಷಿಕ ಸಾಮಾನ್ಯ ಮಹಾಸಭೆಯು ಉಡುಪಿ ಕುಂಜಿಬೆಟ್ಟಿನಲ್ಲಿರುವ ಶಾರದಾ ಕಲ್ಯಾಣ ಮಂಟಪದಲ್ಲಿ ತಾರೀಖು 10-09-2022ರಂದು ಜರುಗಿತು. ಬ್ಯಾಂಕಿನ ವಾರ್ಷಿಕ ಸಾಮಾನ್ಯ ಮಹಾಸಭೆಗೆ ಅಧ್ಯಕ್ಷರಾದ ಶ್ರೀ ಎಚ್. ಜಯಪ್ರಕಾಶ್ ಕೆದ್ಲಾಯರವರು ಅಧ್ಯಕ್ಷತೆ ವಹಿಸಿ ಸದಸ್ಯರನ್ನು ಸ್ವಾಗತಿಸಿ ಬ್ಯಾಂಕಿನ ಪ್ರಗತಿಯ ಬಗ್ಗೆ ಪ್ರಸ್ತಾವನೆಗೈದು ವರದಿ ವಾಚಿಸಿದರು. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಪಿ. ವಿಷ್ಣುಮೂರ್ತಿ ಆಚಾರ್ಯರವರು ಸಾಮಾನ್ಯ ಮಹಾಸಭೆಯ ನಡವಳಿಯನ್ನು ಮಂಡಿಸಿದರು.

ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದ ಪ್ರಕಾರ ನಮ್ಮ ಬ್ಯಾಂಕಿನಲ್ಲಿ ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ (BOM)ನ್ನು ರಚಿಸಲಾಗಿದ್ದು ಇದರಲ್ಲಿ ಶ್ರೀ ಚಂದ್ರಶೇಖರ ನಾವಡರವರು ಚೇರ್‌ಮನ್ ಆಗಿ, ಶ್ರೀ ಎಚ್. ಜಯಪ್ರಕಾಶ್ ಕೆದ್ಲಾಯ, ಶ್ರೀ ಪಿ. ರಾಘವೇಂದ್ರ ಭಟ್, ಶ್ರೀ ವೆಂಕಟೇಶ ಮಿತ್ಯಾಂತಾಯ ಹಾಗೂ CA ಶ್ರೀ ಶ್ರೀಕೃಷ್ಣ ಎಲ್. ಆಚಾರ್ಯರವರು ಸದಸ್ಯರಾಗಿರುತ್ತಾರೆ.

ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಪಿ. ರಾಘವೇಂದ್ರ ಭಟ್, ನಿರ್ದೇಶಕರುಗಳಾದ ಶ್ರೀ ಜಗನ್ನಾಥ್ ಜಿ, ಶ್ರೀ ಜಯಪ್ರಕಾಶ್ ಭಂಡಾರಿ, ಶ್ರೀ ದೇವದಾಸ್, ಶ್ರೀ ಭಾಸ್ಕರ ರಾವ್ ಕಿದಿಯೂರು, ಶ್ರೀ ಸೂರ್ಯಪ್ರಕಾಶ್ ರಾವ್ ಎನ್., ಶ್ರೀ ಎನ್. ಪ್ರಹ್ಲಾದ್ ಬಲ್ಲಾಳ್, ಶ್ರೀಮತಿ ಮನೋರಮಾ ಎಸ್. ಮತ್ತು ಶ್ರೀಮತಿ ರೂಪಾ ಮೋಹನ್ ಹಾಗೂ ಮುಖ್ಯ ಸಲಹೆಗಾರರಾದ ಶ್ರೀ ಎಸ್. ಕುಮಾರಸ್ವಾಮಿ ಉಡುಪರವರು ಉಪಸ್ಥಿತರಿದ್ದರು. ಉತ್ತಮವಾಗಿ ಕಾರ್ಯನಿರ್ವಹಿಸಿದ ಮುಖ್ಯ ಶಾಖೆ, ಕಟಪಾಡಿ ಶಾಖೆ ಹಾಗೂ ಕಿನ್ನಿಮೂಲ್ಕಿ ಶಾಖೆಗಳಿಗೆ ಕ್ರಮವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಪ್ರಶಸ್ತಿಗಳನ್ನು ನೀಡಲಾಯಿತು. ಸಹಾಯಕ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾದ ಶ್ರೀ ಎ. ರಾಘವೇಂದ್ರ ಹೆಬ್ಬಾರ್‌ರವರು ಧನ್ಯವಾದ ಸಲ್ಲಿಸಿದರು. ಶಾಖಾ ವ್ಯವಸ್ಥಾಪಕರಾದ ಶ್ರೀ ಕೆ. ಹರಿಪ್ರಸಾದ್‌ರವರು ಕಾರ್ಯಕ್ರಮವನ್ನು ನಿರೂಪಿಸಿದರು.

## ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ನಮ್ಮ ಬ್ಯಾಂಕಿನ ಕಾರ್ಯಕ್ಷೇತ್ರ ವ್ಯಾಪ್ತಿಯಲ್ಲಿ ಸದಸ್ಯತ್ವವನ್ನು ಹೊಂದಿದ ವ್ಯಕ್ತಿಯು ಈಗ ನಮ್ಮ ಬ್ಯಾಂಕಿನ ಕಾರ್ಯಕ್ಷೇತ್ರ ವ್ಯಾಪ್ತಿಯಿಂದ ಹೊರಗೆ ನೆಲೆಸಿದ್ದು ಹಾಗೂ ಅಲ್ಲಿಯ ಕೆ.ವೈ.ಸಿ ದಾಖಲೆಗಳನ್ನು ಹೊಂದಿದ್ದು, ಈಗ ನಮ್ಮ ಬ್ಯಾಂಕಿನಲ್ಲಿ ಅವರ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆಯಲು ಬಂದಿದ್ದು, ಆ ಕೆ.ವೈ.ಸಿ ಆಧಾರದ ಮೇಲೆ ಬ್ಯಾಂಕಿನಲ್ಲಿ ಖಾತೆಯನ್ನು ತೆರೆಯಲು ಅವಕಾಶ ಇದೆಯಾ ಎಂಬುದರ ಕುರಿತು ಕಾನೂನು ಸಲಹೆ ನೀಡಬೇಕಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.**

**- ಪಟ್ಟಣ ಸಹಕಾರ ಬ್ಯಾಂಕ್ ಲಿ., ಶಿವಮೊಗ್ಗ ಜಿಲ್ಲೆ.**

**ಉತ್ತರ :** ಖಾತೆಯನ್ನು ತೆರೆಯಲು ವ್ಯಕ್ತಿಯೊಬ್ಬರು ಗುರುತಿನ ಪುರಾವೆ ಮತ್ತು ವಿಳಾಸದ ಪುರಾವೆಗಾಗಿ ದಿನಾಂಕ: ಫೆಬ್ರವರಿ 29, 2016 (ಮೇ 10, 2022ರಂದು ನವೀಕರಿಸಲಾದ)ರ ಕೆವೈಸಿ ಸಂಬಂಧಿತ ರಿಜರ್ವ್ ಬ್ಯಾಂಕಿನ ಮಾಸ್ಟರ್ ಡೈರೆಕ್ಷನ್‌ನ ಪ್ಯಾರಾ 3(xiii) ರಲ್ಲಿ ವ್ಯಾಖ್ಯಾನಿಸಲಾದ ಅಧಿಕೃತವಾಗಿ ಮಾನ್ಯವಾದ ದಾಖಲೆಗಳನ್ನು (ಒ.ವಿ.ಡಿ) ಸಲ್ಲಿಸಬೇಕು. ಗ್ರಾಹಕರು ಒದಗಿಸಿದ ಒ.ವಿ.ಡಿ ಯಲ್ಲಿ ನವೀಕರಿಸಿದ ವಿಳಾಸ ಹೊಂದಿಲ್ಲದಿದ್ದರೆ, ವಿಳಾಸದ ಪುರಾವೆಯ ಸೀಮಿತ ಉದ್ದೇಶಕ್ಕಾಗಿ, ವಿದ್ಯುತ್, ದೂರವಾಣಿ, ಪೋಸ್ಟ್‌ಪೇಯ್ಡ್ ಮೊಬೈಲ್ ಫೋನ್, ಗ್ಯಾಸ್, ನೀರಿನ ಬಿಲ್, ಆಸ್ತಿ ಅಥವಾ ನಗರ ಸಭೆಯ ತೆರಿಗೆ ರಶೀದಿ, ಸರಕಾರ ಮತ್ತು ಸರಕಾರಿ ಸ್ವಾಮ್ಯದ ಸಂಸ್ಥೆಗಳು ತಮ್ಮ ನೌಕರರಿಗೆ ವಸತಿ ಹಂಚಿಕೆ ಪತ್ರ ಮುಂತಾದ ದಾಖಲೆಗಳನ್ನು ಅಧಿಕೃತವಾಗಿ ಮಾನ್ಯವಾದ ದಾಖಲೆ ಎಂದು ಪರಿಗಣಿಸಲಾಗುವುದು. ಬ್ಯಾಂಕಿನ ಸದಸ್ಯತ್ವವನ್ನು ಅಧಿಕೃತವಾಗಿ ಮಾನ್ಯವಾದ ದಾಖಲೆ ಎಂದು ಪರಿಗಣಿಸಲಾಗುವುದಿಲ್ಲ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯ ಕಲಂ 16(ಎ) ಪ್ರಕಾರ ಬ್ಯಾಂಕಿನ ಸದಸ್ಯತ್ವ ಬಯಸುವ ವ್ಯಕ್ತಿಯು ಬ್ಯಾಂಕಿನ ಕಾರ್ಯಾಚರಣೆಯ ಪ್ರದೇಶದಲ್ಲಿ ವಾಸಿಸುತ್ತಿರಬೇಕು ಮತ್ತು ಈಗಾಗಲೇ ಸದಸ್ಯನಾದ ವ್ಯಕ್ತಿಯು ಅನರ್ಹತೆ ಪಡೆದ ದಿನಾಂಕದಿಂದ ಆತನ ಸದಸ್ಯತ್ವ ಕೊನೆಗೊಂಡಿದೆ ಎಂದು ಭಾವಿಸತಕ್ಕದ್ದು.



## ಆನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಹುಬ್ಬಳ್ಳಿಯಲ್ಲಿ ವಿದ್ಯುತ್ ಚಾಲಿತ ರೈಲಿಗೆ ಚಾಲನೆ ನೀಡುವ ಮೂಲಕ ಇಂಧನ ಉಳಿತಾಯ ಸಾಧಿಸಿರುವ ನೈರುತ್ಯ ರೈಲ್ವೇ ಇದೀಗ ಅದರ ಜೊತೆಗೆ ತನ್ನ ಹಳಿಯ ವ್ಯಾಪ್ತಿಯಲ್ಲ ಗಿಡ ನಡೆಸುವ ಮೂಲಕ ಪರಿಸರ ರಕ್ಷಣೆ ಹೊಣೆ ಹೊತ್ತಿದೆ.
- ಅಮೆಜಾನ್ ಸಂಸ್ಥಾಪಕ ಜೆಫ್ ಬೆಜೋಸ್, ಬರ್ನಾರ್ಡ್ ಅರ್ನಾಲ್ಟ್ ಇಬ್ಬರನ್ನೂ ಹಿಂದಿಕ್ಕಿರುವ ಗೌತಮ್ ಅದಾನಿ ಫೋರ್ಬ್ಸ್ ರಿಯಲ್-ಟೈಮ್ ಬಿಲ್ಲಿಯನ್ನೇರ್‌ಗಳ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿದ್ದಾರೆ.
- ದೇಶದಲ್ಲಿ 1952ರಲ್ಲಿ ನಶಿಸಿ ಹೋಗಲಾಗಿದೆ ಎಂದು ಘೋಷಿಸಲಾಗಿದ್ದ ಚೀತಾಗಳು 70 ವರ್ಷಗಳ ನಂತರ, ನಮೀಬಿಯಾದ ರಾಜಧಾನಿಯಿಂದ ವಿಶೇಷ ರೀತಿಯಲ್ಲಿ ವಿನ್ಯಾಸಗೊಳಿಸಲಾದ ಬೋಯಿಂಗ್ ವಿಮಾನದ ಮೂಲಕ ಬಂದಿಳಿದಿವೆ.
- ಮಕ್ಕಳಲ್ಲಿ ಜ್ವರ ತರಹದ ಕಾಯಿಲೆ ಹೆಚ್ಚಿದ ಹಿನ್ನೆಲೆಯಲ್ಲಿ ಕಳೆದವಾರದಿಂದ, ಸೆಪ್ಟೆಂಬರ್ 25ರವರೆಗೆ ಒಂದರಿಂದ ಏಳನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಮಕ್ಕಳ ಶಾಲೆಗಳನ್ನು ಮುಚ್ಚುವುದಾಗಿ ಪುದುಚೇರಿ ಸರ್ಕಾರ ಘೋಷಿಸಿದೆ.
- ನವದೆಹಲಿಯಲ್ಲಿ ಮಹಡಿಯಿಂದ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದ 16 ತಿಂಗಳ ಪುಟ್ಟ ಮಗು ರಿಶಾಂತ್‌ನ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟ ಹಿನ್ನೆಲೆಯಲ್ಲಿ ಅದರ ಪೋಷಕರು ತಮ್ಮ ಮಗುವಿನ ಅಂಗಾಂಗ ದಾನ ಮಾಡುವ ಮೂಲಕ ಇಬ್ಬರು ಮಕ್ಕಳ ಜೀವ ಉಳಿಸಿ ಸಾರ್ಥಕತೆ ಮೆರೆದಿದ್ದಾರೆ.
- ಲಂಡನ್‌ನ ವೆಸ್ಟ್‌ಮಿನಿಸ್ಟರ್ ಅಬೆಯಲ್ಲಿ ನಡೆಯುವ ಅಂತ್ಯಕ್ರಿಯೆಗೂ ಮೊದಲು ಸಂಸತ್ತಿನ ಹಾಲ್‌ನಲ್ಲಿ ಇತ್ತೀಚೆಗೆ ನಿಧನರಾದ ರಾಣಿ ಎಲಿಜಬೆತ್ ಅವರ ಅಂತಿಮ ನಮನ ಕಾರ್ಯಕ್ರಮ ನಡೆಯಲಿದೆ.
- ಚೀನಾದ ಬೀಜಿಂಗ್ ಸನಿಹದ ಚಾಂಗ್ಶಾ ನಗರದಲ್ಲಿನ ಗಗನಚುಂಬಿ ಕಟ್ಟಡದಲ್ಲಿ ಬೃಹತ್ ಬೆಂಕಿ ಕಾಣಿಸಿಕೊಂಡಿದೆ ಎಂದು ವರದಿಯಾಗಿದೆ.
- ಬೆಂಗಳೂರು ಮೂಲದ ಪ್ರಣವ್ ಆನಂದ್ ಅವರು ರೊಮೇನಿಯಾದ ಮಾಮಿಯಾದಲ್ಲಿ ನಡೆಯುತ್ತಿರುವ ವಿಶ್ವ ಯೂತ್ ಚೆಸ್ ಚಾಂಪಿಯನ್ ಶಿಪ್‌ನಲ್ಲಿ 2,500 ಎಲೋ ಗಡಿ ದಾಟಿ ಭಾರತದ 76ನೇ ಗ್ರ್ಯಾಂಡ್ ಮಾಸ್ಟರ್ ಆಗಿ ಹೊರಹೊಮ್ಮಿದ್ದಾರೆ.

## ಓದುಗರ ಅನಿಸಿಕೆ...


ಪಟ್ಟಣ ಸಹಕಾರ ಬ್ಯಾಂಕುಗಳ
ವಾರ್ತಾ ಪತ್ರಿಕೆ

**ಮುಂದಿನ ದಿನಗಳು ಕಷ್ಟಕರವಾಗಲಿದೆ :** ಐಎಂಎಫ್ ಉಪ ವ್ಯವಸ್ಥಾಪಕ ನಿರ್ದೇಶಕಿ ಗೀತಾ ಗೋಪಿನಾಥ್ ಅವರ ಪ್ರಕಾರ ಹಣದುಬ್ಬರ ನಿಯಂತ್ರಿಸಲು ಆರ್.ಬಿ.ಐ. ನಿರ್ಣಾಯಕ ಕ್ರಮಗಳನ್ನು ಕೈಗೊಳ್ಳಬೇಕಿದೆ. ಇಲ್ಲದಿದ್ದಲ್ಲಿ ಬೆಲೆ ಏರಿಕೆ ಒತ್ತಡ ಮುಂದುವರಿದು ಉದ್ಯೋಗ, ಮಾರುಕಟ್ಟೆ ಮತ್ತು ಪೂರೈಕೆ, ಹಾಗೂ ಬೆಲೆ ಏರಿಕೆ ಹೀಗೆಯೇ ಮುಂದುವರಿದು, ಜನರ ಪಾಲಿಗೆ ಮುಂದಿನ ದಿನಗಳು ಕಷ್ಟಕರವಾಗಲಿದೆ.

**ಕೆ. ಆನಂದತೀರ್ಥ, ಧಾರವಾಡ**

**ಅಂದು ಹೇಳಿದ್ದು ನೆನಪಿದೆ! :** ಕಳೆದ ವರ್ಷ ದೇಶದಲ್ಲಿ ವಶಪಡಿಸಿಕೊಂಡ ನಕಲಿ ನೋಟುಗಳಲ್ಲಿ ಶೇ.60ರಷ್ಟು ರೂ.2,000 ನೋಟುಗಳಾಗಿವೆ ಎಂದು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ ಹೇಳಿದೆ. ನಕಲಿ ನೋಟುಗಳ ಚಲಾವಣೆಯನ್ನು ತಡೆಯುವ ಸಲುವಾಗಿಯೇ ನೋಟು ಅಮಾನ್ಯೀಕರಣ ಮಾಡುತ್ತಿರುವುದಾಗಿಯೂ ಈ ಹೊಸ ನೋಟುಗಳು ಯಾವುದೇ ರೀತಿಯಲ್ಲೂ ನಕಲು ಮಾಡಲು ಸಾಧ್ಯವಿಲ್ಲವೆಂದು ಅಂದು ಹೇಳಿದ್ದು ನೆನಪಿದೆ!

**ಮಲ್ಲಿಕಾರ್ಜುನ ಮೇಲಿನಮನಿ, ಹಾವೇರಿ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.